ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರ
ಆವಕ ಶಾಖೆ
ಸಂಖ್ಯೆ 1118
ದಿನಾಂಕ 08/12/2020

DVP-2 2007949/2020

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:- ನಿಟ್ಟೆ ಮೀನಾಕ್ಷಿ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು, ಈ ಸಂಸ್ಥೆಯಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ ಏರೋನಾಟಿಕಲ್ ಇಂಜಿನಿಯರಿಂಗ್ ಡಿಪ್ಲೋಮೊ ಹೊಸ ಕೋರ್ಸನ್ನು ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡುವ ಬಗ್ಗೆ.

267
9-12-2020

*****

**ಓ ದ ಲಾ ಗಿ ದೆ:-**

1. Member Secretary, All Indian council for Technical Education ಇವರ ಪತ್ರ ಸಂಖ್ಯೆ: South-West/1-7003765549/2020/EOA, Dated:15.06.2020.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಿಟಿಇ 13 ಡಿವಿಪಿ(2) 2020/353, ದಿನಾಂಕ:02.09.2020.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ Member Secretary, All Indian council for Technical Education ಇವರು ನಿಟ್ಟೆ ಮೀನಾಕ್ಷಿ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಈ ಸಂಸ್ಥೆಯಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಕೋರ್ಸುಗಳೊಂದಿಗೆ ಏರೋನಾಟಿಕಲ್ ಇಂಜಿನಿಯರಿಂಗ್ ಡಿಪ್ಲೋಮೊ ಹೊಸ ಕೋರ್ಸನ್ನು 60 ವಿದ್ಯಾರ್ಥಿ ಪ್ರಮಾಣದೊಂದಿಗೆ ಕೆಲವೊಂದು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಿ ಪ್ರಾರಂಭಿಸಲು ಅನುಮತಿ ನೀಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ನಿಟ್ಟೆ ಮೀನಾಕ್ಷಿ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಈ ಸಂಸ್ಥೆಯಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ ಏರೋನಾಟಿಕಲ್ ಇಂಜಿನಿಯರಿಂಗ್ ಡಿಪ್ಲೋಮೊ ಹೊಸ ಕೋರ್ಸನ್ನು 60 ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು ಎಐಸಿಟಿಇ, ನವದೆಹಲಿ ಇವರು ಅನುಮತಿ ನೀಡಿರುವ ಮೇರೆಗೆ ಸದರಿ ಸಂಸ್ಥೆಯ ಪ್ರಾಂಶುಪಾಲರು 2020-21ನೇ ಸಾಲಿನಿಂದ ಸದರಿ ಕೋರ್ಸನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಕೋರಿದ ಹಿನ್ನೆಲೆಯಲ್ಲಿ, ಈ ಬಗ್ಗೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ತನಿಖಾ ತಂಡವು ಸದರಿ ಪಾಲಿಟೆಕ್ನಿಕ್‌ಗೆ ಭೇಟಿ ನೀಡಿ, "ಏರೋನಾಟಿಕಲ್ ಇಂಜಿನಿಯರಿಂಗ್" ಡಿಪ್ಲೋಮಾ ಕೋರ್ಸನ್ನು ಪ್ರಾರಂಭಿಸಲು 2020-21ನೇ ಸಾಲಿನಿಂದ ಸಂಸ್ಥೆಯವರು ಒದಗಿಸಿಕೊಂಡಿರುವ ಮೂಲಭೂತ ಸೌಕರ್ಯಗಳನ್ನು ವೀಕ್ಷಿಸಿ, ಸ್ಥಳ ಪರಿವೀಕ್ಷಣೆ ಮಾಡಿ ನಿಗದಿತ ನಮೂನೆಯಲ್ಲಿ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ 2020-21ನೇ ಸಾಲಿನಿಂದ ನಿಟ್ಟೆ ಮೀನಾಕ್ಷಿ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಈ ಸಂಸ್ಥೆಯಲ್ಲಿ "ಏರೋನಾಟಿಕಲ್ ಇಂಜಿನಿಯರಿಂಗ್" ಡಿಪ್ಲೋಮೊ ಹೊಸ ಕೋರ್ಸನ್ನು 60 ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು ಶಿಫಾರಸ್ಸು ಮಾಡಿರುತ್ತಾರೆ. ಅದರಂತೆ, 2020-21ನೇ ಶೈಕ್ಷಣಿಕ ಸಾಲಿನಿಂದ ನಿಟ್ಟೆ ಮೀನಾಕ್ಷಿ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಸಂಸ್ಥೆಯಲ್ಲಿ ಹೊಸದಾಗಿ "ಏರೋನಾಟಿಕಲ್ ಇಂಜಿನಿಯರಿಂಗ್" ಡಿಪ್ಲೋಮಾ ಹೊಸ ಕೋರ್ಸನ್ನು 60 ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಬಹುದೆಂದು ಶಿಫಾರಸ್ಸು ಮಾಡಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 110 ಟಿಪಿಇ 2020.**
**ಬೆಂಗಳೂರು, ದಿನಾಂಕ: 05ನೇ ಡಿಸೆಂಬರ್ 2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ನಿಟ್ಟೆ ಮೀನಾಕ್ಷಿ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಈ ಸಂಸ್ಥೆಯಲ್ಲಿ 2020-21ನೇ ಶೈಕ್ಷಣಿಕ ಸಾಲಿನಿಂದ "ಏರೋನಾಟಿಕಲ್ ಇಂಜಿನಿಯರಿಂಗ್ ಡಿಪ್ಲೋಮಾ ಕೋರ್ಸನ್ನು 60 ವಿದ್ಯಾರ್ಥಿ ಪ್ರಮಾಣದೊಂದಿಗೆ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗೊಳಪಡಿಸಿ ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು:-**

1. ಸದರಿ ಕೋರ್ಸನ್ನು ನಡೆಸಲು ಸರ್ಕಾರದಿಂದ ಯಾವುದೇ ಅನುದಾನವನ್ನು ಕೋರುವಂತಿಲ್ಲ.
2. ಸದರಿ ಕೋರ್ಸಿನ ಪ್ರವೇಶಾತಿಗೆ ಸಂಬಂದಿಸಿದಂತೆ, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳನ್ನು ಮತ್ತು ಸೂಚನೆಗಳನ್ನು ತಪ್ಪದೆ ಪಾಲಿಸುವುದು.
3. ಸದರಿ ಕೋರ್ಸಿನ ಮಂಜೂರಾತಿ ಪತ್ರದಲ್ಲಿ All Indian council for Technical Education ಇವರು ವಿಧಿಸಿರುವ ಷರತ್ತುಗಳು ಮತ್ತು ನಿಬಂಧನೆಗಳನ್ನು ಯಥಾವತ್ತಾಗಿ ಪಾಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

05/12/2020
(ಎಂ.ಜಿ. ವೆಂಕಟೇಶಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).

**ಗೆ:**

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಪ್ರಾಂಶುಪಾಲರು, ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು 560064. (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಮುಖಾಂತರ).
4. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.
5. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಉನ್ನತ ಶಿಕ್ಷಣ ಇಲಾಖೆ (ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ).
6. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು / ಓಡಿಜಿಸಿ.

**ಹಿಂಬರಹ ಸಂಖ್ಯೆ: ಡಿಟಿಇ 13 ಡಿವಿಪಿ (2) 2020** **ದಿನಾಂಕ: 14-12-2020**

ಸರ್ಕಾರಿ ಆದೇಶ, **ಸಂಖ್ಯೆ: ಇಡಿ 110 ಟಿಪಿಇ 2020. ಬೆಂಗಳೂರು, ದಿನಾಂಕ: 05ನೇ ಡಿಸೆಂಬರ್ 2020**. ರ ಪ್ರತಿಯನ್ನು ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಲಾಗಿದೆ.

1. ಅಧ್ಯಕ್ಷರು/ ಕಾರ್ಯದರ್ಶಿಗಳು, NMIT Polytechnic(568), #6429, Gollahalli, yelahanka, Bengaluru-560064.
2. ಪ್ರಿನ್ಸಿಪಾಲರು, NMIT Polytechnic(568), #6429, Gollahalli, yelahanka, Bengaluru-560064.
3. ಜಂಟಿ ನಿರ್ದೇಶಕರು [ಆಡಳಿತ/ಪರೀಕ್ಷೆ/ತನಿಖೆ/ಸಿಡಿಸಿ]
4. ಸಹಾಯಕ ನಿರ್ದೇಶಕರು [ಆಡಳಿತ/ಯೋಜನೆ/ಪರೀಕ್ಷೆ/ತನಿಖೆ]
5. ಉಪ ನಿರ್ದೇಶಕರು [ಯೋಜನೆ/ಪರೀಕ್ಷೆ ಎಟಿಎಸ್]
6. ಉಪ ನಿರ್ದೇಶಕರು [ಸಾಂಖ್ಯಿಕ ವಿಭಾಗ]
7. ಆಡಳಿತಾಧಿಕಾರಿಗಳಿಗೆ.
8. ರಿಜಿಸ್ಟ್ರಾರ್ – [ಪರೀಕ್ಷೆ/ಎಸಿಎಂ]
9. ಅಧೀಕ್ಷಕರು, ಎಸಿಎಂ ವಿಭಾಗ
10. ಕಾರ್ಯನಿರ್ವಾಹಕರು, ಎಸಿಎಂ[2] ವಿಭಾಗ
11. ಸರ್ಕಾರಿ ಆದೇಶಗಳ ಕಡತಕ್ಕೆ
12. ಇ–ಗೌರನೆನ್ಸ್ ಸೆಲ್.
13. ಕಛೇರಿ ಪ್ರತಿಗಳು.

ಜಂಟಿ ನಿರ್ದೇಶಕರು [ಆಡಳಿತ]